# ಗ್ರಾಮೀಣ ಆಶ್ರಯ

ನಮೂನೆ -9 | RAS

## ಜಿಲ್ಲಾ ಪಂಚಾಯತ್,________

ಕರ್ನಾಟಕ ಸರ್ಕಾರ

ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತ

ತಾಲ್ಲೂಕು ಪಂಚಾಯಿತಿ ____________________ ತಾಲ್ಲೂಕು

**ಆಶ್ರಯ ವಸತಿ ಯೋಜನೆಯಡಿ ಮನೆ ಮಂಜೂರಾತಿ ಪತ್ರ ಮತ್ತು**

**ಕಾಮಗಾರಿ ಆದೇಶ**

**200__200__ ಆಶ್ರಯ ವಸತಿ ಯೋಜನೆಯಲ್ಲಿ________________________ಗ್ರಾಮ ಪಂಚಾಯಿತಿ ವ್ಯಾಪ್ತಿಯ ______________________ಗ್ರಾಮದ ಶ್ರೀಮತಿ/ಶ್ರೀ ___________________________ಬಿನ್/ಕೋಂ. _____________________ ಅವರಿಗೆ ಈ ಕೆಳಕಂಡ ನಿಬಂಧನೆಗಳಿಗೆ ಒಳಪಟ್ಟು ಮನೆ ನಿರ್ಮಾಣ ಮಾಡಲು ಮಂಜೂರಾತಿ ನೀಡಲಾಗಿದೆ.**

1. ಫಲಾನುಭವಿಯು ಸ್ವತಃ ಮನೆಯನ್ನು ನಿರ್ಮಾಣ ಮಾಡಿಕೊಳ್ಳತಕ್ಕದ್ದು. ಕನಿಷ್ಠ 200 ಚ.ಅ ಅಷ್ಟು ಕಟ್ಟಡವನ್ನು ಕಟ್ಟಿಕೊಳ್ಳಬೇಕು ಆದರೆ ಗರಿಷ್ಠ 400 ಚ.ಅ.ಯೊಳಗಿರಬೇಕು.
2. ಈ ಮಂಜೂರಾತಿ ಆದೇಶ ತಲುಪಿದ **15** ದಿನಗಳೊಳಗೆ ಮನೆ ನಿರ್ಮಾಣವನ್ನು ಪ್ರಾರಂಭಿಸಿ ಆರು ತಿಂಗಳೊಳಗಾಗಿ ಮನೆಯನ್ನು ಕಡ್ಡಾಯವಾಗಿ ಪೂರ್ಣಗೊಳಿಸತಕ್ಕದ್ದು.
3. ಕಾಮಗಾರಿ ಆದೇಶ ನೀಡಿದ ಆರು ತಿಂಗಳೊಳಗಾಗಿ ಮನೆ ಕಾಮಗಾರಿಯನ್ನು ಪೂರ್ಣಗೊಳಿಸದಿದ್ದಲ್ಲಿ ನೀಡಲಾದ ಅನುದಾನವನ್ನು ಹಿಂಪಡೆಯುವ ಹಕ್ಕನ್ನು ಕಾಯ್ದಿರಿಸಿ ಈ ಆದೇಶ ನೀಡಿದೆ.
4. ಈ ಯೋಜನೆಯಡಿ ಒಟ್ಟು ರೂ. **20,000/-** ಧನಸಹಾಯ ಮಂಜೂರು ಮಾಡಿದೆ. ಪರಿಶಿಷ್ಟ ಜಾತಿ/ಪಂಗಡದವರಿಗೆ ಇದು ಪೂರ್ಣ ಅನುದಾನವಾಗಿರುತ್ತದೆ. ಸಾಮಾನ್ಯ ವರ್ಗದ ಫಲಾನುಭವಿಗಳಾದಲ್ಲಿ ಈ ಪೈಕಿ ರೂ.**10,000/-** ಶೇಕಡ 11ಬಡ್ಡಿ ದರದೊಡನೆ ಸಾಲವಾಗಿರುತ್ತದೆ. ಈ ಸಾಲವನ್ನು **15** ವರ್ಷಗಳ ಅವಧಿಯಲ್ಲಿ 180 ಮಾಸಿಕ ಸಮಕಂತುಗಳಲ್ಲಿ ಮರುಪಾವತಿ ಮಾಡತಕ್ಕದ್ದು. ಸಾಲದ ಕೊನೆಯ ಕಂತನ್ನು ಬಿಡುಗಡೆ ಮಾಡಿದ ಮುಂದಿನ ತಿಂಗಳಿನಿಂದ ಮಾಸಿಕ ಕಂತಿನ ಮರುಪಾವತಿ ಪ್ರಾರಂಭವಾಗುತ್ತದೆ. (ರೂ10000/-ಸಾಲಕ್ಕೆ ಮಾಸಿಕ ಕಂತು ರೂ.115/- ರಂತೆ ). ಫಲಾನುಭವಿಯು ಇಚ್ಛಿಸಿದಲ್ಲಿ ತನ್ನ ಕೈಲಾದಷ್ಟು ಸ್ವತಃ ಹೆಚ್ಚಿನ ವಂತಿಗೆಯನ್ನು ಹಾಕಿಕೊಂಡು ಹೆಚ್ಚಿನ ಸೌಲಭ್ಯಗಳನ್ನು ಪಡೆದುಕೊಳ್ಳಬಹುದು.
5. ಫಲಾನುಭವಿಯು ಪ್ರತಿ ಹಂತದ ನಿರ್ಮಾಣ ಕಾರ್ಯ ಅಂದರೆ ತಳಪಾಯ ಮುಗಿಸಿದ ನಂತರ ರೂ. **5000/-**ಗಳನ್ನು, ಗೋಡೆ ಪೂರ್ಣಗೊಳಿಸಿದ ನಂತರ ರೂ. **5,000/-**ಗಳನ್ನು, ಮತ್ತು ಮೇಲ್ಛಾವಣಿ ಪೂರ್ಣಗೊಳಿಸಿದ ನಂತರ ರೂ. **5000/-**ಗಳನ್ನು, ಹಾಗೂ ಮನೆಯನ್ನು ಪೂರ್ಣಗೊಳಿಸಿದ ನಂತರ **ರೂ. 5000/-**ಗಳನ್ನು ಹೀಗೆ ಒಟ್ಟು ನಾಲ್ಕು ಕಂತುಗಳಲ್ಲಿ ಹಣವನ್ನು ಕ್ರಾಸ್ಡ್ ಅಕೌಂಟ್ ಪೇಯಿ ಮಾಡಿದ ಚೆಕ್ ಮೂಲಕ ಫಲಾನುಭವಿಯ ಬ್ಯಾಂಕ್ ಖಾತೆಗೆ ಜಮಾ ಮಾಡುವ ಮೂಲಕ ಪಾವತಿಸಲಾಗುವುದು.
6. ಫಲಾನುಭವಿಯ ಈ ಕೆಳಕಂಡ ದಾಖಲಾತಿಗಳನ್ನು ಪರಿಶೀಲಿಸಿ ಧೃಢೀಕರಿಸಲಾಗಿದ್ದು ಅದರನ್ವಯ ಈ ಆದೇಶವನ್ನು ಹೊರಡಿಸಲಾಗಿದೆ.
   (1) ಮೂಲ ಅರ್ಜಿ ನಿಗದಿತ ನಮೂನೆ -1ರಲ್ಲಿ (ಭಾವಚಿತ್ರ ಸಮೇತ)
   (2) 50 ರೂ. ಛಾಪಾಕಾಗದ. -ನಮೂನೆ - 2/2A ರಲ್ಲಿ ಕರಾರು ಪತ್ರ (2-ಸಾಲ ಅಥವಾ ಸಾಲ ಮತ್ತು ಸಹಾಯಧನ/2ಎ-ಸಹಾಯಧನ ಮಾತ್ರ ಆಗಿದ್ದಲ್ಲಿ)
   (3) ಅಡಮಾನ ಪತ್ರ (ನಮೂನೆ 3/3ಎರಲ್ಲಿ)
   (4) ಫಲಾನುಭವಿಯು ನಿವೇಶನಕ್ಕೆ ಸಂಬಂಧಿಸಿದ ಅ) ಮೂಲ ಹಕ್ಕುಪತ್ರ ಆ) ಖಾತಾ ನಕಲು
   (5) ಮನೆ ಕಟ್ಟಲು ಲೈಸನ್ಸ್
   (6) ತಹಶೀಲ್ದಾರರಿಂದ ಆದಾಯ ಮತ್ತು ಜಾತಿ ಧೃಢೀಕರಣ ಪತ್ರ

ವಿಶೇಷ ಸೂಚನೆ:

ಈ ಮೇಲ್ಕಂಡ ಕರಾರುಗಳನ್ವಯ ನಿಮಗೆ ಈ ಮೂಲಕ ಕಾಮಗಾರಿ ಆದೇಶವನ್ನು ನೀಡಲಾಗುತ್ತಿದ್ದು ಕೂಡಲೇ ಮನೆಯ ಕಾಮಗಾರಿಯನ್ನು ಪ್ರಾರಂಭ ಮಾಡಿಕೊಳ್ಳಲು ತಿಳಿಸಿದೆ. ತಳಪಾಯ, ಗೋಡೆ, ಮೇಲ್ಛಾವಣಿ ಮತ್ತು ಮನೆಯನ್ನು ಪೂರ್ಣಗೊಳಿಸಿದ ಹಂತಗಳಲ್ಲಿ ಫಲಾನುಭವಿಯನ್ನೊಳಗೊಂಡ ಭಾವಚಿತ್ರಗಳನ್ನು ಹಂತವಾರು ಸಲ್ಲಿಸಿ ಅನುದಾನವನ್ನು ಪಡೆದುಕೊಳ್ಳಲು ತಿಳಿಸಿದೆ. ಮೇಲೆ ತಿಳಿಸಿರುವ ಅಂಶಗಳಲ್ಲಿ ಒಂದು ವೇಳೆ ಯಾವುದನ್ನಾದರೂ ಉಲ್ಲಂಘಿಸಿದಲ್ಲಿ ಅಥವಾ ತಪ್ಪು ಮಾಹಿತಿ ನೀಡಿದ್ದಲ್ಲಿ ಯಾವುದೇ ಸೂಚನೆ ನೀಡದೆ ಮಂಜೂರಾತಿಯನ್ನು ರದ್ದುಗೊಳಿಸಲಾಗುವುದು. ಮತ್ತು ನೀಡಿದ ಅನುದಾನವನ್ನು ಸಂಪೂರ್ಣವಾಗಿ ಒಂದೇ ಕಂತಿನಲ್ಲಿ ಬಡ್ಡಿ ಸಮೇತ ವಸೂಲಿ ಮಾಡಲಾಗುವುದು ಮತ್ತು ಸೂಕ್ತ ಕಾನೂನು ಕ್ರಮ ಜರುಗಿಸಲಾಗುವುದು ಎಂದು ಸಹ ತಿಳಿಯುವುದು.

ದಿನಾಂಕ: ಗ್ರಾಮ ಪಂಚಾಯಿತಿ ಕಾರ್ಯದರ್ಶಿ

ಸ್ಥಳ :

ಈ ಮೇಲೆ ತಿಳಿಸಿರುವ ಕರಾರುಗಳನ್ವಯ ಒಪ್ಪಿ ಓದಿ/ಓದಿಸಿ ತಿಳಿದುಕೊಂಡು ಈ ಕಾಮಗಾರಿ ಆದೇಶವನ್ನು ಪಡೆದುಕೊಂಡಿರುತ್ತೇನೆ.

ಫಲಾನುಭವಿಯ ಸಹಿ

(ಸೌಜನ್ಯ: ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತ, ಬೆಂಗಳೂರು - 9)